ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ತಾಲ್ಲೂಕು : ಪಂಚಾಯತ್ ಆನೇಕಲ್

# ಗ್ರಾಮ ಪಂಚಾಯಿತಿ ಕಾರ್ಯಾಲಯ, ಮುಗಳೂರು

ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 562125,

E-mail : mugulurugpi@rediffmail.com ದೂರವಾಣಿ ಸಂಖ್ಯೆ : 080-27823917

ಕ್ರಮ. ಸಂಖ್ಯೆ: ಮುಗ್ರಾಪಂ/21/2024-25 ದಿನಾಂಕ : : 16/07/2024

## ನಿರಾಕ್ಷೇಪಣಾ ಪತ್ರ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಮುಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾದಪ್ಪನಹಳ್ಳಿ ಗ್ರಾಮದ ಸರ್ವೇ ನಂ 24/6 ರಲ್ಲಿ 1-00 ಎಕರೆಗುಂಟೆ, ಜಮೀನು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ALN (A)(S): SR 23/2024-25 ದಿನಾಂಕ 14/06/2024 ರಂತೆ ಸರ್ವೆ ನಂ: 22/2 ರಲ್ಲಿ 6 ಎಕರೆ 2 ಗುಂಟೆ ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ALN (A)(S): SR 96/23-24 ದಿನಾಂಕ 08/11/2023 ರಂತೆ, ಸರ್ವೆ ನಂ: 21 ರಲ್ಲಿ 3 ಎಕರೆ 31 ಗುಂಟೆ ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ALN (A)(S): SR 31/23-24 ದಿನಾಂಕ 19/07/2023 ಒಟ್ಟು 10 ಎಕರೆ 33 ಗುಂಟೆ ಜಮೀನಿನಲ್ಲಿ ಸದರಿ ಜಮೀನಿನಲ್ಲಿ SIPANI PROPERTIES ಸಿಪಾನಿ ಪ್ರಾಪರ್ಟೀಸ್ ಪ್ರೈ ಲಿ ರವರು ವಸತಿ ಸಮುಚ್ಚಯ ನಿರ್ಮಿಸಲು ಉದ್ದೇಶಿಸಿರುತ್ತಾರೆ.

ಸದರಿಯವರು ಉದ್ದೇಶಿಸಿರುವ ವಸತಿ ಸಮುಚ್ಚಯ ಯೋಜನೆಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಗ್ರಾಮ ಪಂಚಾಯತಿ ವತಿಯಿಂದ ಯಾವುದೇ ಅಕ್ಷೇಪಣೆ ಇರುವುದಿಲ್ಲ.

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಸಮುಚ್ಚಯ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಶುಲ್ಕವನ್ನು ಸಂದಾಯ ಮಾಡಿದ ನಂತರ ಅವಶ್ಯವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ಧೃಢೀಕರಿಸುತ್ತೇವೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸವಾದಲ್ಲಿ ಹಾಗೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದ್ದು.

ಈ ವಸತಿ ಸಮುಚ್ಚಯಕ್ಕೆ ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಅಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂಧಪಟ್ಟವರಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಮುಗಳೂರು ಗ್ರಾಮ ಪಂಚಾಯತಿ
ಆನೇಕಲ್ ತಾಲ್ಲೂಕು

ರವರಿಗೆ
ಮಾನ್ಯ ಸದಸ್ಯ ಕಾರ್ಯದರ್ಶಿಗಳು
ಆನೇಕಲ್ ಯೋಜನಾ ಪ್ರಾಧಿಕಾರ
ನಂ.430 "ಅಣ್ಣ" ಬಿಲ್ಡಿಂಗ್ ಹೆನ್ನಾಗರ ಗೇಟ್
ಅತ್ತಿಬೆರೆ ಹೋಬಳಿ,ಹೊಸೂರು ರಸ್ತೆ
ಆನೇಕಲ್ ತಾಲ್ಲೂಕು,ಬೆಂಗಳೂರು ನಗರ ಜಿಲ್ಲೆ-560099